(ವಿವರ ನೀಡುವುದು)

ಅ) ಇದರ ನಿರ್ಮಾಣ ಕಾರ್ಯವನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಮಂತ್ರಿಗಳು) :—

ಅ) ಆಣೆಕಟ್ಟು ಕಾಮಗಾರಿಗಳಿಗೆ ಸ್ವೀಕೃತವಾಗಿದ್ದು ಟೆಂಡರ್ ಪ್ರಕ್ರಿಯೇ ಮೌಲ್ಯೀಕರಣ ಸರ್ಕಾರದ ಪರಿಶೀಲನೆಯಲ್ಲಿದೆ. ಕಾಲುವೆ ಕಾಮಗಾರಿಗಳು 0. ಕಿ.ಮೀ. ಯಿಂದ 10 ಕಿ.ಮೀ. (ಅರಣ್ಯ ಪ್ರದೇಶದ ಬಿಡುಗಡೆಯಾಗಬೇಕಾದ ರೀಚ್ ಗಳನ್ನು ಹೊರತುಪಡಿಸಿ ಪ್ರಗತಿಯಲ್ಲಿವೆ. ಯೋಜನೆಗೆ ಕ್ಲಿಯರೆನ್ಸ್ ಪಡೆಯಲು ಕೇಂದ್ರ ಸರ್ಕಾರದೊಡನೆ ವ್ಯವಹರಿಸಲಾಗುತ್ತಿದೆ.

ಆ) ಪ್ರಮುಖ ಕಾಮಗಾರಿಗಳನ್ನು ಕ್ರಿ.ಶ 2000 ದೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ತುಂಗಾ ಮೇಲ್ದಂಡೆ ವೆಚ್ಚ.

1629 (2310) ಶ್ರೀ ಯು.ಬಿ. ಬಣಕಾರ್. (ಹಿರೇಕೆರೂರು) :— ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುಂಗಾ ಮೇಲ್ದಂಡೆ ಯೋಜನೆಗೆ 1998-99ನೇ ಸಾಲಿನಲ್ಲಿ ನಿಗಧಿ ಮಾಡಿದ ಹಣ ಎಷ್ಟು ಬಿಡುಗಡೆ ಮಾಡಿದ ಹಣ ಎಷ್ಟು. ಖರ್ಚಾದ ಹಣ ಎಷ್ಟು.

ಆ) 1998-99ನೇ ಸಾಲಿನಲ್ಲಿ ರಟ್ಟೀಹಳ್ಳಿ ವಿಭಾಗಕ್ಕೆ ಯಾವ ಯಾವ ಕಾಮಗಾರಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ (ಪೂರ್ಣ ವಿವರ ನೀಡುವುದು)

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಮಂತ್ರಿಗಳು) :—

ಅ) ತುಂಗಾ ಮೇಲ್ದಂಡೆ ಯೋಜನೆಗೆ 1998-99ನೇ ಸಾಲಿನಲ್ಲಿ ನಿಗಧಿಮಾಡಿದ ಹಣ ರೂ. 450 ಲಕ್ಷಗಳಿರುತ್ತದೆ. ಮತ್ತು ಬಿಡುಗಡೆ ಮಾಡಿದ ಹಣ ರೂ. 149.00 ಲಕ್ಷಗಳು ಹಾಗೂ ಖರ್ಚಾದ ಹಣ ರೂ. 412.79 ಲಕ್ಷಗಳು. ಇದರಲ್ಲಿ ಸಿಬ್ಬಂದಿ ವೆಚ್ಚವೂ ಸೇರಿದೆ. ಸಿಬ್ಬಂದಿ ವೆಚ್ಚಕ್ಕೆ ಹಣ ಭರಮಸೆ ಪತ್ರದ ಅವಶ್ಯಕತೆ ಇರುವುದಿಲ್ಲ.

ಅ) 1998-99ನೇ ಸಾಲಿನಲ್ಲಿ ರಟ್ಟೀಹಳ್ಳಿ ವಿಭಾಗದ ಕಾಮಗಾರಿಗೆ ಖರ್ಚು ಮಾಡಿದ ಹಣದ ವಿವರ ಈ ಕೆಳಗಿನಂತಿದೆ.

1.	ಕಾಲುವೆ ಮತ್ತು ಉಪಕಾಲುವೆ	ರೂ. 0.86 ಲಕ್ಷಗಳು
2.	ರಸ್ತೆಗಳು	-
3.	ಹೊಸ ಸರಬರಾಜು	ರೂ. 0.15 ಲಕ್ಷಗಳು
4.	ದುರಸ್ಥಿ ಮತ್ತು ಸಾಗಣೆ	ರೂ. 2.86 ಲಕ್ಷಗಳು
5.	ಕಟ್ಟಡಗಳು	ರೂ. 28.45 ಲಕ್ಷಗಳು
		ಒಟ್ಟು ರೂ. 32.32 ಲಕ್ಷಗಳು

ಬಿಜಾಪುರ ಜಲ್ಲೆಯಲ್ಲಿ ಮದ್ಯದ ಅಂಗಡಿಗಳಿಗೆ ಪರವಾನಗಿ.

1630(2374)ಶ್ರೀ ಬಸನಗೌಡ ರಾಮನಗೌಡ ಪಾಟೀಲ ಯತ್ನಾಳ (ಬಿಜಾಪುರ) :— ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಬಿಜಾಪುರ ಜಿಲ್ಲೆಯಲ್ಲಿ 1998-99ರ ಅವಧಿಯಲ್ಲಿ ಪರವಾನಗೆ ನೀಡಲಾದ ಮದ್ಯದ ಅಂಗಡಿಗಳ ಒಟ್ಟು ಸಂಖ್ಯೆ ಎಷ್ಟು?

2) ಸಿಎಲ್-2, ಸಿಎಲ್-9 ಹೆಸರಿನಲ್ಲಿ ಪರವಾನಗಿ ನೀಡಿರುವವರ ಸಂಖ್ಯೆ ಎಷ್ಟು? (ಸಂಪೂರ್ಣ ಹೆಸರು ವಿವರ ನೀಡುವುದು)

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು) :—

1) 1998-99ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಯಲ್ಲಿ ನಾಲ್ಕು (4) ಸಿಎಲ್-9 ಸನ್ನದುಗಳನ್ನು ಹೊಸದಾಗಿ ಮಂಜೂರು ಮಾಡಲಾಗಿದೆ.

2) ಸಿಎಲ್-9 ಪರವಾನಗಿ ಪಡೆದಿರುವವರ ವಿವರಗಳು ಈ ಕೆಳಕಂಡಂತಿವೆ.